ಕೊಂಡೊಯ್ದಿತು. ಬಾಕಿ ವಿಷಯ ಹೇಳುವ ಮುನ್ನ ಅಂದಿನ ಮೈಸೂರಿನ ಬಗ್ಗೆ ಹೇಳಲೇಬೇಕು. ಆಗ (ಸರಿಸುಮಾರು ಈಗಲೂ ಕೂಡ) ಮೈಸೂರು ಒಂದು ದೊಡ್ಡ ಹಳ್ಳಿ. ಜನರ ಬಳಿ ಬೇಕಾದಷ್ಟು ಸಮಯವಿರುತ್ತಿದ್ದ ಸಮೃದ್ಧಿಯ ಕಾಲ. ಅಲ್ಲಿ ಬೆಳಗಾಗುವುದೇ ಎಂಟು ಗಂಟೆಯ ನಂತರ. ಸಾಯಂಕಾಲ ಏಳಕ್ಕೆ ಎಲ್ಲರೂ ಮನೆ ಸೇರಿ, ಒಂಬತ್ತಕ್ಕೆ ಊಟ ಮಾಡಿ ಹತ್ತು ಗಂಟೆಗೆ ಇಡೀ ಊರೇ ಮಲಗಿಬಿಡುತ್ತಿತ್ತು. ರಾತ್ರಿ ನಮ್ಮ ಮನೆಯಿಂದ ಸುಮಾರು ಆರೇಳು ಕಿಲೋಮೀಟರಿನಷ್ಟು ದೂರವಿದ್ದ ಮೃಗಾಲಯದ ಸಿಂಹ–ಹುಲಿಗಳ ಗರ್ಜನೆ ಕೇಳಿಸುತ್ತಿತ್ತು.

ನಾಟಕ, ನೃತ್ಯ, ಸಾಹಿತ್ಯ ಇತ್ಯಾದಿ ಕಲಾ ಚಟುವಟಿಕೆಗಳಿಂದ ತುಂಬಿ ತುಳುಕುತ್ತಿದ್ದ ಸಾಂಸ್ಕೃತಿಕ ರಾಜಧಾನಿಯಾದ ಮೈಸೂರು, ಹಲವರಿಗೆ ಗೊತ್ತಿಲ್ಲದ ಮತ್ತೊಂದು ಕಾರಣಕ್ಕೆ ಪತ್ರಿಕಾ ಪ್ರಪಂಚದಲ್ಲಿ ಹೆಸರುವಾಸಿ. ಅದೇನೆಂದರೆ, ಇಡೀ ಭಾರತದಲ್ಲೇ ಅತ್ಯಂತ ಹೆಚ್ಚಿನ ದಿನಪತ್ರಿಕೆಗಳು ಹೊರಬರುತ್ತಿದ್ದ ಊರು ಮೈಸೂರು. ಈಗ ಈ ದಾಖಲೆ ಯಾವ ನಗರಕ್ಕಿದೆಯೋ ನನಗೆ ಗೊತ್ತಿಲ್ಲ. ಜಗತ್ತಿನಲ್ಲೇ ಸಂಸ್ಕೃತ ಭಾಷೆಯ ಏಕೈಕ ದಿನಪತ್ರಿಕೆ 'ಸುಧರ್ಮ'ದ ತವರು ಕೂಡ ಮೈಸೂರು.

ಮೈಸೂರಿನಲ್ಲಿ ನಮ್ಮ ಮನೆ ಸುಬ್ಬರಾಯನಕೆರೆ ಹತ್ತಿರದ ಕ್ಷೇತ್ರಯ್ಯ ರಸ್ತೆಯಲ್ಲಿ. ಇಲ್ಲಿಂದ ಮೂರು ದಾರಿಯ ನಂತರ ಇದ್ದ ಡಿ. ಸುಬ್ಬಯ್ಯ ರಸ್ತೆಯಲ್ಲಿ 'ಸಾಧ್ವಿ' ದಿನಪತ್ರಿಕೆಯ ಕಾರ್ಯಾಲಯವಿತ್ತು. ಇದರ ಆಗಿನ ಮಾಲೀಕರು ಹಾಗೂ ಸಂಪಾದಕರು ಅಗರಂ ರಂಗಯ್ಯನವರು. ಈ ಪತ್ರಿಕೆ ಮೈಸೂರಿನ ಸಾಕಷ್ಟು ಪ್ರಸಿದ್ಧ ಪತ್ರಿಕೆಗಳಲ್ಲೊಂದು. ಈ ಪತ್ರಿಕೆಯ ಸ್ಥಾಪಕರು ಸ್ವಾತಂತ್ರ್ಯ ಹೋರಾಟಗಾರ ಮತ್ತು ತಾತಯ್ಯ ಎಂದು ಹೆಸರಾದ ವೆಂಕಟಕೃಷ್ಣಯ್ಯನವರು. ಮೈಸೂರು ನಗರಕ್ಕೆ ಹಾಗೂ ಇಲ್ಲಿಯ ನಾಗರಿಕರಿಗೆ ಇವರ ಗುರುತರ ಸೇವೆಯ ನೆನಪಾಗಿ ಇವರ ಪ್ರತಿಮೆಯನ್ನು ಮೈಸೂರಿನ ನಗರ ಬಸ್ ನಿಲ್ದಾಣದ ಎದುರಿಗೆ ಲಾನ್ಸ್ ಡೌನ್ ಕಟ್ಟಡದ ಮುಂದಿರುವ ಉದ್ಯಾನದಲ್ಲಿ ಸ್ಥಾಪಿಸಲಾಗಿದೆ.

'ಸಾಧ್ವಿ' ಪತ್ರಿಕೆಯ ಪ್ರಕಟಣೆ ಸಾಯಂಕಾಲ. ಅದರ ಪ್ರಸಾರದ ಸಂಖ್ಯೆ ನನಗೆ ಗೊತ್ತಿಲ್ಲದ ವಿಷಯ. ಆದರೆ, ಹಳೇ ಮೈಸೂರಿನ ತುಂಬ ಇದರ ಓದುಗರ ಮನೆಗಳಿದ್ದವು. ಸುಮಾರು ಸಂಜೆ ನಾಲ್ಕು ಗಂಟೆಯ ಹೊತ್ತಿಗೆ ಮುದ್ರಣವಾಗುತ್ತಿದ್ದ ಪೇಪರನ್ನು ಮೂರ್ನಾಲ್ಕು ಜನ ಊರಿನ ಬೇರೆ ಬೇರೆ ಕಡೆ ವಿತರಿಸಲು ಹೊರಡುತ್ತಿದ್ದರು. ಎಲ್ಲರೂ ಕಾಲ್ನಡಿಗೆಯಲ್ಲೇ. ಎಲ್ಲರ ಬಳಿ ಮಿಲಿಟರಿ ಹಸಿರು ಬಣ್ಣದ ಒಂದು ಕೈಚೀಲ. ಅದರಲ್ಲಿ ಆಗ ತಾನೇ ಮುದ್ರಣಗೊಂಡು ಹೊರಬಂದ ಪತ್ರಿಕೆ ಅರ್ಧಕ್ಕೆ ಸುತ್ತುಹಾಕಿ, ವಿತರಿಸಲು ಅನುಕೂಲವಾಗುವಂತೆ ವ್ಯವಸ್ಥೆ.

ಈ ಪತ್ರಿಕೆಯನ್ನು ನಮ್ಮ ಮನೆ ಕಡೆ ವಿತರಿಸಲು ಬರುತ್ತಿದ್ದವರ ಹೆಸರು ಸುಬ್ಬರಾಮಯ್ಯ ಎಂದು. ಇವರ ವ್ಯಕ್ತಿಚಿತ್ರ ಈಗಲೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದಂತಿದೆ. ಸುಮಾರು ನಲವತ್ತು ವರ್ಷದ ಸಾಧಾರಣ ಮೈಕಟ್ಟಿನ ದೇಹ. ನಗುಮುಖ. ಹವಾಯಿ ಚಪ್ಪಲಿ. ಮಳೆಗಾಲದಲ್ಲಾದರೆ ಕೈಯಲ್ಲೊಂದು ಛತ್ರಿ. ನಮ್ಮ ಇಡೀ ಕೇರಿಯಲ್ಲಿ ಇವರು ಪ್ರಸಿದ್ಧಿ. ಎಲ್ಲರ ಮನೆ ಬಾಗಿಲಿಗೆ ಹೋಗಿ ಯಾರಿರುತ್ತಾರೋ ಅವರ ಕೈಯಲ್ಲಿ ಪತ್ರಿಕೆ ಕೊಟ್ಟು, ಕ್ಷೇಮ ವಿಚಾರಿಸಿ, ಮುನ್ನಡೆಯುತ್ತಿದ್ದರು. ಇಡೀ ಕೇರಿಯ ಮನೆಗಳು, ಅದರಲ್ಲಿರುವವರು, ಅವರು ಮಾಡುವ ಕೆಲಸ, ಅವರ ಮಕ್ಕಳು, ಅದರಲ್ಲಿ ಗಂಡೆಷ್ಟು, ಹೆಣ್ಣೆಷ್ಟು, ಅವರೇನು ಓದುತ್ತಿದ್ದಾರೆ, ಯಾವ ಶಾಲೆ, ಮನೆಯಲ್ಲಿ ಹಸು ಸಾಕಿದ್ದರೆ ಅದರ ವಿವರ, ನಾಯಿ ಸಾಕಿದ್ದರೆ ಅದರ ವಿವರ ಇತ್ಯಾದಿ... ಹೀಗೆ ಪೂರ್ತಿ ಕೇರಿಯ ವಿವರಗಳನ್ನು ಬೆರಳಿನ ತುದಿಯಲ್ಲಿ ಇಟ್ಟಿರುತ್ತಿದ್ದರು ಈ ಮಹಾನುಭಾವ. ಮನೆಗಳವರೂ ಅಷ್ಟೇ – ಇವರನ್ನ ತಮ್ಮ ಮನೆಗೆ ದಿನಾ ಬರುವ ನೆಂಟನ ರೀತಿ ಕಾಣುತ್ತಿದ್ದರೆಂದರೆ ತಪ್ಪಿಲ್ಲ. ದಿನವೂ ಇವರಿಗೆ ಸಾಯಂಕಾಲದ ಕಾಫಿ ಕಡಿಮೆಯೆಂದರೂ ಮೂರ್ನಾಲ್ಕು ಗ್ರಾಹಕರ ಮನೆಯಲ್ಲಿ ಆಗುತ್ತಿತ್ತು. ನಮ್ಮ ಮನೆಯಲ್ಲಿ ಕಾಫಿಗೆ ಕರೆದರೆ 'ಇಲ್ಲಮ್ಮ, ಈಗ ತಾನೆ ಮೂಲೆ ಮನೆಯಲ್ಲಾಯಿತು' ಅಂತ ಹೇಳಿ ಅಥವ 'ಕೊಡಿ ತಾಯಿ, ಇವತ್ತು ನಿಮ್ಮ ಮನೆಯಲ್ಲೇ ಮೊದಲ ಕಾಫಿ' ಅಂತ ಮನೆ ಒಳಗೆ ಬಂದು ಕೂತು, 'ಎಲ್ಲಿ ಯಜಮಾನ್ರು ಕಾಣಿಸ್ತಾ ಇಲ್ಲ, ದೊಡ್ಡ ಮಗ ಏನು ಮಾಡ್ತಿದ್ದಾನೆ ಈಗ, ನಿಮ್ಮ ಚಿಕ್ಕ ಮಗಳು ಅವಿಲ ಕಾನ್ವೆಂಟ್ ಅಲ್ಲವೇ' ಅಂತೆಲ್ಲಾ ಮಾತಾಡಿ, ನಂತರ ಡಿ. ಸುಬ್ಬಯ್ಯ ರಸ್ತೆಯಿಂದ ನಮ್ಮ ಮನೆ ತನಕ ಅವತ್ತಿನ ದಿನದ ವಿಶೇಷಗಳನ್ನ ತಿಳಿಸಿ, ಕಾಫಿ ಕುಡಿದು, 'ಬರ್ತೀನಮ್ಮ, ಸೊಗಸಾಗಿತ್ತು ಕಾಫಿ, ಇನ್ನೂ ತುಂಬ ಮನೆಗೆ ಪೇಪರ್ ಕೊಡೋದಿದೆ" ಅಂತ ಹೇಳಿ ಮುನ್ನಡೆಯುತ್ತಿದ್ದರು. ಇಡೀ ಕೇರಿಯ ದಿನದ ವಿಶೇಷಗಳು, ಎಂದರೆ ಯಾರ ಮನೆ ಹುಡುಗ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಪಾಸಾದ ಅಥವ ಯಾರ ಮನೆಯಲ್ಲಿ ಇವತ್ತು ಸೊಸೆಗೆ ಬಳೆ ತೊಡಿಸುವ ಕಾರ್ಯಕ್ರಮ ಇತ್ತು ಎಂಬ ಶುಭ ಸಮಾಚಾರಗಳಿಂದ ಹಿಡಿದು, ಯಾರಿಗೆ ತೊಂದರೆಯಾಗಿ ಆಸ್ಪತ್ರೆಗೆ ಸೇರಿಸಲಾಗಿದೆ, ಯಾರ ಮನೆಯಲ್ಲಿ ವಯಸ್ಸಾಗಿದ್ದ ಯಾರು ವಿಧಿವಶರಾದರು ಎಂಬ ಶೋಕ ಸಮಾಚಾರಗಳಲ್ಲದೆ, ಯಾರ ಮನೆಯಲ್ಲಿ ಹಸು ಹೆಣ್ಣುಕರುವಿಗೆ ಜನ್ಮ ನೀಡಿತು, ಎಂಬ ಅಷ್ಟೇನೂ ವಿಶೇಷವಲ್ಲದ ಸಮಾಚಾರಗಳೂ ಇವರಿಂದಲೇ ಎಲ್ಲರಿಗೂ ತಿಳಿಯುತ್ತಿತ್ತು.

ನಾನು ಮೊದಲೇ ಹೇಳಿದಂತೆ, ಮೈಸೂರು ಒಂದು ದೊಡ್ಡ ಹಳ್ಳಿ. ಸರಿಸುಮಾರು ಎಲ್ಲರು ಎಲ್ಲರಿಗೂ ಗೊತ್ತಿರುತ್ತಿದ್ದ ಪರಿಸ್ಥಿತಿ. ಹೀಗಾಗಿ, ಎಲ್ಲರಿಗೂ ಎಲ್ಲರ ಮನೆ ವಿಷಯವೆಂದರೆ ಕುತೂಹಲವೆ. ಸುಬ್ಬರಾಮಯ್ಯನವರು ಆಗಿನ ಕಾಲದ ಸಾರ್ವಜನಿಕ ಫೇಸ್‌ಬುಕ್ ಅಂತ ಇಟ್ಟುಕೊಳ್ಳಿ. ಇವರೇ ಅದರ ಕಂಟ್ರೋಲರ್ ಹಾಗೂ ಅಪ್‌ಡೇಟರ್. ಬಹುಶಃ ಅವರು ತರುತ್ತಿದ್ದ ಪೇಪರಿಗಿಂತಲೂ ಅವರು ತರುತ್ತಿದ್ದ ಸುದ್ದಿಗಳೇ ಹೆಚ್ಚಿರುತ್ತಿದ್ದವೋ ಏನೋ. ಹೀಗಾಗೇ, ನನ್ನ ಪ್ರಕಾರ ಇವರು ಕೆ.ಎಸ್. ನರಸಿಂಹಸ್ವಾಮಿಯವರ ಕಲ್ಪನಾಲೋಕದ 'ಮೈಸೂರ ಮಲ್ಲಿಗೆ'ಯ ನಿಜರೂಪದ ಬಳೆಗಾರ ಚೆನ್ನಯ್ಯ.

ಬೆಂಗಳೂರಿನ 'ಎನ್‌ಬಿಎ' ಆಟಗಾರರನ್ನು ನೋಡಿ ಈ ಬಳೆಗಾರ ಚೆನ್ನಯ್ಯನನ್ನು ನೆನಪಿಸಿಕೊಳ್ಳಲು ಇನ್ನೊಂದು ಮುಖ್ಯ ಕಾರಣವೆಂದರೆ ತನ್ನ ಕೆಲಸದ ಮೇಲಿದ್ದ ಶ್ರದ್ಧೆ. ಮಳೆಗಾಲವಾದರೆ ಛತ್ರಿ ಹಿಡಿದು, ಬಿಸಿಲಾದರೆ ಟೊಪ್ಪಿ ಧರಿಸಿ, ಚಳಿಗಾಲದಲ್ಲಿ ಒಂದು ಸ್ವೆಟರ್ ಧರಿಸಿ, ತಾನು ಮಾಡುತ್ತಿದ್ದ ಕೆಲಸಕ್ಕೆ ಮತ್ತು ಅದರಿಂದ ಬಂದ ತನ್ನ ಗ್ರಾಹಕರಿಗೆ ಸಂಪೂರ್ಣ ನ್ಯಾಯ ಒದಗಿಸುತ್ತಿದ್ದ ವ್ಯಕ್ತಿ. ನಾವು ಇತ್ತೀಚಿನ ಕಾರ್ಪೊರೇಟ್ ಜಗತ್ತಿನಲ್ಲಿ ಹೆಚ್ಚಾಗಿ ಬಳಸುವ 'ಕಸ್ಟಮರ್ ಸ್ಯಾಟಿಸ್‌ಫ್ಯಾಕ್ಷನ್' (ಗ್ರಾಹಕ ಸಂತೃಪ್ತಿ) ಅನ್ನು ಅದರ ಅರಿವೇ ಇಲ್ಲದೆ ಮೂರು ದಶಕಗಳ ಮೊದಲೇ ತನ್ನ ಕೆಲಸದಲ್ಲಿ ಕಾಣುತ್ತಿದ್ದ ಅಪರೂಪದ ವ್ಯಕ್ತಿ.

ನಾನೊಬ್ಬ ಬ್ಯಾಂಕ್ ಉದ್ಯೋಗಿ. ನಮ್ಮ ಬ್ಯಾಂಕಿನಲ್ಲಿ ಸಾಕಷ್ಟು ಉನ್ನತ ಮಟ್ಟಕ್ಕೇರಿ ಸುಮಾರು ಇಪ್ಪತ್ತೈದು ವರುಷಗಳ ಹಿಂದೆ ನಿವೃತ್ತಿ ಹೊಂದಿದ ಒಬ್ಬ ಅಧಿಕಾರಿಯ ಬಗ್ಗೆ ಹೇಳಲು ಬಯಸುತ್ತೇನೆ. ಇವರು ತಮ್ಮ ಚಿಕ್ಕ ವಯಸ್ಸಿನಲ್ಲಿ ಬೆಳಗಾವಿಯಲ್ಲಿ ಮನೆಮನೆಗೆ ಪೇಪರ್ ಹಂಚುತ್ತಿದ್ದರು. ಬೆಳಗಾವಿಯಲ್ಲಿ ಈಗಲೂ ಧಾರಾಕಾರವಾಗಿ ಮಳೆ ಸುರಿಯುತ್ತದೆ. ಅಂತಹ ಕಡೆ ಸುಮಾರು ಐವತ್ತು ಅಥವ ಐವತ್ತೈದು ವರುಷಗಳ ಹಿಂದೆ ಮಳೆಯ ಆರ್ಭಟವನ್ನು ಊಹಿಸಿಕೊಳ್ಳಬಹುದು. ಬೆಳಗಾವಿಯ ಒಂದು ಸ್ಥಳೀಯ ಬ್ಯಾಂಕಿನ ಅಧಿಕಾರಿ ಇವರ ಗ್ರಾಹಕರಲ್ಲೊಬ್ಬರು. ಮಳೆಗಾಲದಲ್ಲಿ ಕೂಡ ಪೇಪರ್ ನೆನೆಯದಂತೆ ಮನೆ ಬಾಗಿಲಿಗೆ ಬಂದು ಮಳೆ ಬೀಳದ ಕಡೆ ಪೇಪರ್ ಇಟ್ಟು ಹೋಗುತ್ತಿದ್ದ ಈ ಹುಡುಗನ ಶ್ರದ್ಧಾಭರಿತ ಕೆಲಸದ ಧಾಟಿ ನೋಡಿ, ಆ ಅಧಿಕಾರಿ ಈ ಹುಡುಗನನ್ನು ತಮ್ಮ ಬ್ಯಾಂಕಿನಲ್ಲಿ ಜವಾನನನ್ನಾಗಿ ನೇಮಿಸಿಕೊಂಡರು. ಆ ಹುಡುಗ ಅಷ್ಟೇ ಶ್ರದ್ಧೆಯಿಂದ ಬ್ಯಾಂಕಿನ ಕೆಲಸವನ್ನು ಮಾಡಿ, (ಆ ಸ್ಥಳೀಯ ಬ್ಯಾಂಕು ನಂತರ ನಮ್ಮ ಬ್ಯಾಂಕಿನೊಂದಿಗೆ ವಿಲೀನವಾಯಿತು.) ಹಂತಹಂತವಾಗಿ ಮೇಲೇರಿ, ಮೇಲೆ ತಿಳಿಸಿದಂತೆ ಸಾಕಷ್ಟು ಉನ್ನತ ಹುದ್ದೆಯಲ್ಲಿದ್ದು ನಿವೃತ್ತಿ ಹೊಂದಿದರು. ಇವರ ಹೆಸರನ್ನು ನಮ್ಮ ಬ್ಯಾಂಕಿನಲ್ಲಿ ಕೆಲಸದಲ್ಲಿ ಶ್ರದ್ಧೆಯ ಬಗ್ಗೆ ಈಗಲೂ ಉದಾಹರಿಸಲಾಗುತ್ತದೆ.

ಭಾರತ ದೇಶ ಕಂಡ ಶ್ರೇಷ್ಠ ಎಂಜಿನಿಯರ್, ಕನ್ನಡ ನಾಡಿನ ಮಹಾನ್ ವ್ಯಕ್ತಿ ಸರ್ ಎಂ. ವಿಶ್ವೇಶ್ವರಯ್ಯನವರ ಒಂದು ನುಡಿ ನೆನಪಾಗುತ್ತದೆ – 'ಒಂದು ರಸ್ತೆಯನ್ನು ಗುಡಿಸುವುದಷ್ಟೇ ನಿನ್ನ ಕೆಲಸವಾದರೂ, ಜಗತ್ತಿನಲ್ಲೇ ಅದರಷ್ಟು ಸ್ವಚ್ಛವಾದ ರಸ್ತೆ ಬೇರೆ ಇಲ್ಲ ಎಂದು ನೋಡಿಕೊಳ್ಳುವುದು ನಿನ್ನ ಜವಾಬ್ದಾರಿ'. ಪೇಪರ್ ಒಗೆಯುವುದಷ್ಟೇ ನನ್ನ ಕೆಲಸ ಎಂಬಂತೆ ಒಗೆದು, ರಸ್ತೆ ಮೂಲೆಯ ಟೀ ಅಂಗಡಿಗೆ ಧಾವಿಸಿ, ಅರ್ಧ ಟೀಯೊಂದಿಗೆ ವಾಟ್ಸ್‌ಆ್ಯಪ್ ಸಂದೇಶಗಳನ್ನ ನೋಡುತ್ತ ಕೂಡುವ ಬೆಂಗಳೂರಿನ 'ಎನ್‌ಬಿಎ' ಆಟಗಾರರಿಗೆ ಇವೆಲ್ಲವೂ ಬಹುಶಃ ಊಹಿಸಿಕೊಳ್ಳಲೂ ಸಾಧ್ಯವಿಲ್ಲದ ಮಾತು.

ಕಾಲಾಯ ತಸ್ಮೈ ನಮಃ.